



## ಸಮಾಜಕ್ಕೆ ಕಂಟಕವಲ್ಲ

ನಮ್ಮ ಸಮಾಜದಲ್ಲಿ ಒಂದು ಮಗು ಹೆರುವವರು ಇದ್ದಾರೆ. ಎರಡು ಹೆರುವವರು, ಎರಡಕ್ಕಿಂತ ಹೆಚ್ಚು ಹೆರುವವರೂ ಇದ್ದಾರೆ. ಮಕ್ಕಳನ್ನು ಹೆರಲು ಬಯಸದೆ ಇರುವ ಸಣ್ಣ ಸಂಖ್ಯೆಯ ಜನರಿಂದ ಯಾವುದೇ ಸಮಸ್ಯೆ ಆಗುವುದಿಲ್ಲ. ಕುಟುಂಬ ವ್ಯವಸ್ಥೆಯಲ್ಲಿ ಏನೇ ಬದಲಾವಣೆಯಾದರೂ ನಮ್ಮ ಸಮಾಜದಲ್ಲಿ ವೈವಿಧ್ಯ ಹೇರಳವಾಗಿ ಇರುವುದರಿಂದ, ಹೊಸ ಬದಲಾವಣೆಯೊಂದು ಸಾಮಾಜಿಕ ಸಂರಚನೆಯ ಅಸಮತೋಲನಕ್ಕೆ ಕಾರಣವಾಗುತ್ತದೆ ಎಂದು ಹೇಳಲಾಗದು.

**-ಡಾ. ಎಚ್.ಎಸ್. ಅನುಪಮಾ,** ಸಾಹಿತಿ–ವೈದ್ಯೆ

ಬಲವಾಗಿಯೇ ಬೇರೂರಿದೆ. ಆದರೆ ಗಂಡು–ಗಂಡನ್ನೇ ಮದುವೆಯಾದಾಗ, ಹೆಣ್ಣು–ಹೆಣ್ಣನ್ನೇ ವರಿಸಿದಾಗ, ಮದುವೆಯಾಗುವುದು ಸಂತಾನೋತ್ಪತ್ತಿಗಾಗಿ ಎಂಬ ಪರಿಕಲ್ಪನೆಯ ಮೂಲಕ್ಕೇ ಹೊಡೆತ ಬೀಳುತ್ತದಲ್ಲವೇ? ತಾಯಿಯಾಗುವುದೇ ಹೆಣ್ತನದ ಪರಿಪೂರ್ಣತೆಯ ಕುರುಹು ಎಂದು ನಂಬಿಕೊಂಡಿರುವ ಬಹುಸಂಖ್ಯಾತರಿರುವ ನಮ್ಮ ಸಮಾಜದಲ್ಲಿ ಅಂತರ್‌ಲಿಂಗೀಯ ಸಹಜೀವನವನ್ನು ದಾಂಪತ್ಯದ ರೂಪದಲ್ಲಿ ಒಪ್ಪಿಕೊಳ್ಳುವುದು ಅಷ್ಟು ಸುಲಭವಲ್ಲ.

ಬದಲಾಗುತ್ತಿರುವ ಕುಟುಂಬದ ಪರಿಕಲ್ಪನೆಯ ಬದಲಾವಣೆಗಳ ಭಾಗವಾಗಿಯೇ ಇನ್ನೊಂದು ವಿದ್ಯಮಾನವನ್ನೂ ನಾವು ಗಮನಿಸಬೇಕು. ಹೆಣ್ಣು ಹೆರುವ ಯಂತ್ರವಲ್ಲ, ಮಕ್ಕಳನ್ನು ಪಡೆಯುವುದು ಅನಿವಾರ್ಯ ಕರ್ಮ ಖಂಡಿತಾ ಅಲ್ಲ ಎಂಬ ಮಾತುಗಳೂ ಬಲವಾಗಿ ಕೇಳಿಬರುತ್ತಿರುವ ಈ ಹೊತ್ತಿನಲ್ಲಿಯೇ 'ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಇಲಾಖೆ'ಯ ಸಮೀಕ್ಷೆ – ಹೆಣ್ಣಿನಲ್ಲಿ ಫಲವತ್ತತೆಯ ಪ್ರಮಾಣ ತಗ್ಗಿದೆ, ಅಂದರೆ ಹೆರುವ ಶಕ್ತಿ ಕಡಿಮೆಯಾಗುತ್ತಿದೆ ಎಂದು ವರದಿ ಮಾಡಿದೆ. ಇದೇ ಇಲಾಖೆಯ ಈ ಮುಂಚಿನೆರಡು ಸಮೀಕ್ಷೆಗಳ ಪ್ರಕಾರ ಹೆಣ್ಣುಮಕ್ಕಳಲ್ಲಿ ಫಲವತ್ತೆಯ ಪ್ರಮಾಣ 2015–16ರಲ್ಲಿ 2.2; ಅದಾದ ನಂತರದ ಸಮೀಕ್ಷೆಯಲ್ಲಿ 2.0ಯಷ್ಟು, ಈಗ 2019–21ರ ಸಮೀಕ್ಷೆಯ ಪ್ರಕಾರ, ನಗರ ಪ್ರದೇಶದಲ್ಲಿ 1.6 ಮತ್ತು ಗ್ರಾಮೀಣ ಪ್ರದೇಶದಲ್ಲಿ 2.1ಕ್ಕೆ ಇಳಿದಿದೆ. ಅಂದರೆ ಹೆಣ್ಣಿನ ಫಲವಂತಿಕೆ ಕಡಿಮೆಯಾಗುತ್ತಿರುವುದು ಭಾರತದ ಜನಸಂಖ್ಯೆ ಕಡಿಮೆಯಾಗಲಿಕ್ಕೂ ಕಾರಣವಾಗಲಿದೆ. ಜನಸಂಖ್ಯೆಯೇನೋ ಸಮತೋಲನದ ಮಟ್ಟದಲ್ಲಿ ಇರುತ್ತದೆ ಎಂದು ತಜ್ಞರು ಸಮಾಧಾನದ ಮಾತನಾಡಿದ್ದಾರೆ. ಆದರೆ, ಹೀಗೆ ಹೆಣ್ಣುಮಕ್ಕಳಲ್ಲಿ ಬಂಜೆತನದ ಪ್ರಮಾಣ ಹೆಚ್ಚುತ್ತಾ ಹೋದರೆ ಮುಂದೇನು? ಇದಕ್ಕೆ ಕಾರಣಗಳೇನು? ಪರಿಹಾರಗಳೇನು? ಇದರಿಂದ ಅಸಮತೋಲನ ಏರ್ಪಟ್ಟರೆ ಏನಾಗಬಹುದು? ಈ ಪ್ರಶ್ನೆಗಳಿಗೆ ಉತ್ತರಗಳು ಸುಲಭವಲ್ಲ.

ಮಕ್ಕಳನ್ನು ಹೆರುವುದೊಂದೇ ಹೆಣ್ತನದ ಕುರುಹಲ್ಲ; ಎಲ್ಲ ದೃಷ್ಟಿಯಿಂದಲೂ ಸ್ವಾವಲಂಬಿ ಆಗುತ್ತಿರುವ ಹೆಣ್ಣು ಮಕ್ಕಳನ್ನು ಹೆರದೆಯೂ ಪರಿಪೂರ್ಣ ಜೀವನ ನಡೆಸಬಹುದು ಎಂಬ ರೀತಿಯ ಮಾತುಗಳು ಜೋರಾಗಿಯೇ ಕೇಳಿಬರುತ್ತಿರುವ ಹೊತ್ತಿನಲ್ಲಿಯೇ 'ಫರ್ಟಿಲಿಟಿ ಕೇಂದ್ರ'ಗಳು (Fertility Clinics) ನಾಯಿಕೊಡೆಗಳ ಹಾಗೆ ಹೆಜ್ಜೆಗೊಂದು ಹಾದಿಗೊಂದು ತಲೆಯೆತ್ತಿವೆ. ಅದೊಂದು ದಂಧೆಯಾಗಿಯೂ ಬೆಳೆಯುತ್ತಿವೆ. ಅವುಗಳ ಮೊರೆಹೋಗುವವರಲ್ಲಿ ನಗರಗಳಲ್ಲಿನ ವಿದ್ಯಾವಂತರೇ ಹೆಚ್ಚು ಎಂಬುದು ಇನ್ನೊಂದು ಆಸಕ್ತಿದಾಯಕ ಸಂಗತಿ.

ಮೇಲ್ನೋಟಕ್ಕೆ ಪರಸ್ಪರ ವಿರುದ್ಧವಾಗಿ ಕಾಣಿಸುವ ಈ ವಿದ್ಯಮಾನಗಳ ನಡುವಿನ 'ಜಾಗ'ವನ್ನೊಮ್ಮೆ ಸೂಕ್ಷ್ಮವಾಗಿ ನೋಡಿದರೆ ನಮ್ಮ ಸಮಾಜದ, ಕುಟುಂಬ ವ್ಯವಸ್ಥೆಯ ಹಲವು ಆಯಾಮಗಳು ಬಿಚ್ಚಿಕೊಳ್ಳುತ್ತವೆ.

ಭಾರತದಲ್ಲಿ ಮಗುವನ್ನು ಪಡೆಯುವ ಇಚ್ಛೆಯಿರುವ 27.5 ದಶಲಕ್ಷ ದಂಪತಿಗಳಿಗೆ ಮಕ್ಕಳಾಗುತ್ತಿಲ್ಲ ಎಂಬ ವರದಿಗಳು ಬೆಚ್ಚಿಬೀಳಿಸುತ್ತಿರುವುದಂತೂ ನಿಜ. ಬಂಜೆತನ ಮೊದಲು ಹೆಣ್ಣಿನ ದೂಷಣೆಗೆ ಕಾರಣವಾಗಿತ್ತು. ನಂತರ ವಿಜ್ಞಾನ ಮುಂದುವರೆದು ಸಂಶೋಧನೆಗಳಾದಾಗ ಗಂಡಿನಲ್ಲಿಯೂ ಬಂಜೆತನ ಇದೆ ಎಂದು ಗೊತ್ತಾಯಿತು. ಈಗ ಬಂಜೆತನದ ಬಗೆಗಿದ್ದ ಮೂಢನಂಬಿಕೆಗಳು, ದೂಷಣೆ ತುಸು ಕಡಿಮೆಯಾದಂತೆ ಕಂಡರೂ ಇಂದಿಗೂ 'ಬಂಜೆತನ' ಎನ್ನುವುದು ಸ್ತ್ರೀ

## ಮಗುವಿಲ್ಲ ಎಂಬ ಬೇಸರ ಇಲ್ಲವೇ ಇಲ್ಲ

ನನಗಿದು ಎರಡನೇ ಮದುವೆ. ಮೊದಲ ಮದುವೆ ತೀರಾ ಸಂಪ್ರದಾಯಸ್ಥ ಕುಟುಂಬದ ಹುಡುಗನ ಜೊತೆ ಆಗಿದ್ದರಿಂದ, ನಾನು ಆ ಕುಟುಂಬದ ಸೊಸೆ ಎಂಬುದಷ್ಟೇ ನನ್ನ ಅಸ್ತಿತ್ವವಾಗಿತ್ತು. ನನ್ನ ಕೆಲಸ, ಓದು ಯಾವುದೂ ಮುಖ್ಯ ಆಗಿರಲಿಲ್ಲ. ಮಗು ಹೆರಬೇಕು, ಅದನ್ನು ಪಾಲನೆ ಮಾಡಿಕೊಂಡು ಬೆಳೆಸಬೇಕು ಎಂಬ ಒತ್ತಡ ಇತ್ತು. ನನ್ನ ಸಂಪೂರ್ಣ ವ್ಯಕ್ತಿತ್ವವೇ ಮಗುವಿನ ನೆಪದಲ್ಲಿ ಕಣ್ಮರೆಯಾಗುತ್ತದೆ ಅನ್ನುವ ಭಯ ಕಾಡಿದ್ದರಿಂದ ಸಂಬಂಧದಿಂದ ಆಚೆ ಬರುವಷ್ಟು ನನ್ನ ಮೇಲೆ ಮಾನಸಿಕ ಒತ್ತಡ ಆಯ್ತು. ಈಗ ಎರಡನೇ ಮದುವೆಯಲ್ಲಿ ನನಗೆ ಯಾವುದೇ ಒತ್ತಡ ಇಲ್ಲ. ಸಹಜವಾಗೇ ನನಗೆ ಮಗು ಬೇಕು ಅನಿಸಿದ್ದಿದೆ. ಪ್ರಜ್ಞಾಪೂರ್ವಕಾಗಿ ನಾವಿಬ್ಬರೂ ಕೂತು ಯೋಚಿಸಿ, ನಾವು ಈಗಿರುವುದಕ್ಕಿಂತ ಒಳ್ಳೆಯ ಬದುಕನ್ನು ಮಗುವಿಗೆ ಕಟ್ಟಿಕೊಡಬೇಕೆಂದು ನಿರ್ಧರಿಸಿದ್ದೇವೆ. ಈಗ ಇಬ್ಬರಿಗೂ ಆರಾಮಾಗಿ ಜೀವನ ಕಳೆಯಲು ಬೇಕಾದಷ್ಟು ಆರ್ಥಿಕಶಕ್ತಿಯಿದ್ದರೂ ಒಂದು ಮಗುವನ್ನು ಈಗಿನ ವ್ಯವಸ್ಥೆಯಲ್ಲಿ ಉತ್ತಮವಾಗಿ ಬೆಳೆಸುವಷ್ಟು ಆರ್ಥಿಕವಾಗಿ ನಾವು ಸಬಲರಿಲ್ಲ. ಕೋವಿಡ್ ಕಾರಣದಿಂದ ಸಂಬಳದಲ್ಲಿ ಹೈಕ್ ಸಿಗದ ಕಾರಣ, ಯಾವುದೇ ಬೇಸರವಿಲ್ಲದೆ ಸಹಜವಾಗಿಯೇ ನಾವು 'ಮಗು ಬೇಡ' ಎಂಬ ತೀರ್ಮಾನಕ್ಕೆ ಬಂದೆವು. ಬದುಕನ್ನು ಆದಷ್ಟು ಸರಳ ಮಾಡಿಕೊಳ್ಳಬೇಕೆಂಬುದೇ ನಮ್ಮ ಆಲೋಚನೆಯಾದ್ದರಿಂದ, ಮಗು ಬೇಡ ಎಂಬ ತೀರ್ಮಾನ ತೆಗೆದುಕೊಂಡಾಗ ಬೇಸರವಂತೂ ಆಗಲಿಲ್ಲ.

**-ವಿಜಯಲಕ್ಷ್ಮಿ,** ಶಿಕ್ಷಕಿ ಬೆಂಗಳೂರು